ಆ) ಬೀಳಗಿಯಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಿಸಲು ಸೂಕ್ತ ಜಮೀನನ್ನು ಪಡೆದು ಪ್ರಸ್ತಾವನೆ ಕಳಹಿಸಲು ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ, ಬಾಗಲಕೋಟೆ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿದೆ. ಆದರೆ ಇಲ್ಲಿಯವರೆಗೆ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ಜಮೀನು ದೊರೆತಿರುವುದಿಲ್ಲ.

ಇ) ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಿಸಲು ಸೂಕ್ತ ಜಮೀನು ಗುರತಿಸಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ತಾಲ್ಲೂಕು ಮಟ್ಟದ ಕ್ರೀಡಾಂಗಣ ಸಮಿತಿಯ ಮೂಲಕ ಪ್ರಸ್ತಾವನೆ ಬಂದ ನಂತರ ಮಂಜೂರಾತಿ ಕುರಿತು ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ನಿರಾಣಿ ಮುಗೇಶ್ ರುದ್ರಪ್ಪ : ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಜಿಲ್ಲೆಯಲ್ಲಿ ಬೀಳಗಿ ತಾಲ್ಲೂಕನ್ನು ಹೊರತುಪಡಿಸಿ ಎಲಲಾ ತಾಲ್ಲೂಕಿನಲ್ಲಿ ಸರ್ಕಾರಿ ಕ್ರೀಡಾಂಗಣ ಈಗಾಗಲೇ ಮಂಜೂರು ಆಗಿ ಕೆಲಸ ನಡೆಯುತ್ತಿರುವುದರಿಂದ, ಏಕೈಕ ಬೀಳಗಿ ತಾಲ್ಲೂಕಿನಲ್ಲಿ ಸರ್ಕಾರಿ ಕ್ರೀಡಾಂಗಣ ಇಲ್ಲ. ಈಗಾಗಲೇ ಜಿಲ್ಲೆಯಲ್ಲಿ ಸಭೆಯನ್ನು ಕರೆದು ಆ ಜಮೀನನ್ನು ಕೊಡಲಿಕ್ಕೆ ಶಿಫಾರಸ್ಸು ಮಾಡಲಾಗಿದೆ. ಅದರ ಸಲುವಾಗಿ ಸಾಧ್ಯವಾದಷ್ಟು ಬೇಗನೆ ಈ ಕ್ರೀಡಾಂಗಣವನ್ನು ಮಂಜೂರು ಮಾಡಿ ಬೀಳಗಿ ತಾಲ್ಲೂಕಿನ ಯುವ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮತ್ತು ಕ್ರೀಡಾಂಗಣ ಅಧಿಕಾರಿಗಳಿಗೆ ನಾವು ಪತ್ರ ಬರೆದಿದ್ದೇವೆ. ಅಲ್ಲಿ ಇವರು ಜಾಗವನ್ನು ತೋರಿಸಿದರೆ ನಾವು ಅದಕ್ಕೆ ಕ್ರೀಡಾಂಗಣವನ್ನು ಮಂಜೂರು ಮಾಡುತ್ತೇವೆ. ಸೂಕ್ತ ಸ್ಥಳಾವಕಾಶ ಮಾಡಿಕೊಡಿ ಎಂದು ಕೇಳಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಮಟ್ಟದ ಒಂದು ಸಮತಿ ಇದೆ. ಆ ಸಮಿತಿಯಿಂದ ಶಿಫಾರಸು ಮಾಡಿ ಕಳಹಿಸಿಕೊಡಬೇಕು. ಒಂದು ವೇಳೆ ಹಾಗೇನಾದರೂ ಕಳುಹಿಸಿಕೊಟ್ಟರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಏನ್ನುವ ಮಾತನ್ನು ತಮ್ಮ ಮುಖಾಂತರ ಹೇಳಲಿಕ್ಕೆ ಬಯಸುತ್ತೇನೆ.

ಶಿವಮೊಗ್ಗ ಜಿಲ್ಲೆಯ ಶೆಟ್ಟಿ ಹಳ್ಳಿ ಅಭಯಾರಣ್ಯದ ಅಂಚಿನ ಗ್ರಾಮಕ್ಕೆ ವಿದ್ಯುದ್ಧೀಕರಣಗೊಳಿಸಲು ಸರ್ಕಾರ ಕೈಗೊಂಡ ಕ್ರಮದ ಬಗ್ಗೆ.

(13) 105. ಶ್ರೀ ಹಾಲಪ್ಪ ಹೆಚ್. (ಹೊಸನಗರ ಕ್ಷೇತ್ರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ (ಚಿತ್ರ ಶೆಟ್ಟಿಹಳ್ಳಿ) ಅಭಯಾರಣ್ಯದ ಅಂಚಿನ ಗ್ರಾಮಕ್ಕೆ ವಿದ್ಯುದೀಕರಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಕೈಗೊಂಡಿದ್ದಲ್ಲಿ, ಗ್ರಾಮೀಣ ಇಂಧನ ಭದ್ರತಾ ಯೋಜನೆ ಯಡಿಯಲ್ಲಿ ಈ ಗ್ರಾಮವನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ;

ಇ) ಇದಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ (ಚಿತ್ರ ಶೆಟ್ಟಿಹಳ್ಳಿ) ಅಭಯಾರಣ್ಯದ ಅಂಚಿನ ಗ್ರಾಮಕ್ಕೆ ಸರ್ಕಾರವು ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ವಿದ್ಯುದೀಕರಣಗೊಳಿಸಲು ಕ್ರಮ ಜರುಗಿಸಿದೆ.

ಆ) ಗ್ರಾಮೀಣ ಇಂಧನ ಭದ್ರತಾ ಯೋಜನೆಯಡಿಯಲ್ಲಿ ಈ ಗ್ರಾಮವನ್ನು ವಿದ್ಯುದೀಕರಿಸಲು ಕಾರ್ಯ ಕ್ರಮವನ್ನು ಹಾಕಿಕೊಳ್ಳಲಾಗಿದೆ ಹಾಗೂ ಈ ಬಗ್ಗೆ ಪ್ರಸ್ತಾವನೆಯನ್ನು ಅಸಂಪ್ರದಾಯದ ಇಂಧನ ಮೂಲಗಳ ಮಂತ್ರಾಲಯ, ನವದೆಹಲಿಗೆ ದಿನಾಂಕ 12.01.2006 ರಂದು ಕಳುಹಿಸಿಕೊಡಲಾಗಿದೆ. ಇದಕ್ಕೆ ಅನುಮೋದನೆ ದೊರೆತ ಕೂಡಲೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಈ ಯೋಜನೆಯ ವೆಚ್ಚವು ರೂ. 36.5 ಲಕ್ಷಗಳೆಂದು ಅಂದಾಜಿಸಲಾಗಿದೆ.

ಶ್ರೀ ಹೆಚ್. ಹಾಲಪ್ಪ : ಅಧ್ಯಕ್ಷರೆ, ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ವಿದ್ಯುದೀಕರಣಗೊಳಿಸಲು ಕ್ರಮ ಜರುಗಿಸಿದೆ ಎಂದು ಉತ್ತರಿಸಿದ್ದಾರೆ. ನಮಗೆ ರೆಗ್ಯುಲರ್ ವಿದ್ಯುತ್ ಅನ್ನೇ ಮುಖ್ಯಮಂತ್ರಿಗಳು ಕೊಡಬಹುದಲ್ಲಾ? ಏಕೆ ಈ ಹೊಸ ಯೋಜನೆ ನಮಗೆ ಗೊತ್ತಿಲ್ಲ. ಈ ಹಳ್ಳಿಗಳು ಶರಾವತಿ ಡ್ಯಾಂ ಕಟ್ಟಬೇಕಾದರೆ ಜಲ ವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾಗದಂಥ ಹಳ್ಳಿಗಳು. ಇವರಿಗೆ ವಿದ್ಯುತ್ ಅನ್ನು ಕೊಡಬೇಕಾದರೆ ನೀವು ನವದೆಹಲಿಗೆ ದಿ:12.01.2006ರಂದು ಕಳುಹಿಸಲಾಗಿದೆ. ಇದಕ್ಕೆ ಅನುಮೋದನೆ ದೊರೆತ ಕೂಡಲೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಉತ್ತರಿಸಿದ್ದೀರಿ. ಅನುಮತಿ ದೊರೆಯದಿದ್ದರೆ? ರೆಗ್ಯುಲರ್ ವಿದ್ಯುತ್ ಕೊಡಿ ಸ್ವಾಮಿ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಶೆಟ್ಟಿಹಳ್ಳಿ ಅಭಯಾರಣ್ಯದ ಅಂಚಿನ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ಕೆಲಸದಲ್ಲಿ ಈಗಾಗಲೇ ಏನು ಅಲ್ಲಿ ಅರಣ್ಯ ಇಲಾಖೆಯ ಕೆಲವು ಕಾನೂನಿನಡಿಯಲ್ಲಿ ವಿದ್ಯುದೀಕರಣದ

ಕೆಲಸವನ್ನು ಮಾಡತಕ್ಕಂಥದ್ದಕ್ಕೆ ಏನು ಕ್ಲಿಯರೆನ್ಸ್ ಆಗಬೇಕಾಗಿದೆ ಆ ದೃಷ್ಟಿಯಿಂದ ಸ್ವಲ್ಪ ತಡವಾಗಿರತಕ್ಕಂಥದ್ದು. ಅದರ ಜೊತೆಗೆ ಹೊಸದಾಗಿ ಇಂಧನ ಭದ್ರತಾ ಯೋಜನೆಯಲ್ಲಿ ಮಾಡತಕ್ಕಂಥದ್ದಕ್ಕೆ ಏನು ದೆಹಲಿಗೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ, ಅದಕ್ಕೆ ಆದಷ್ಟು ಬೇಗ ಅನುಮತಿಯನ್ನು ಪಡೆಯತಕ್ಕಂಥದ್ದಕ್ಕೆ ಗಮನಹರಿಸುತ್ತೇವೆ. ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಈಗಾಗಲೇ 36 ಲಕ್ಷ ರೂಪಾಯಿಗಳ ಅಂದಾಜು ವೆಚ್ಚವನ್ನೂ ಈಗಾಗಲೇ ಮಾಡಿರತಕ್ಕಂಥೆ ಇದೆ, ಆದಷ್ಟು ಬೇಗ ಆ ಕೆಲಸವನ್ನು ಕಾರ್ಯಾರಂಭ ಮಾಡತಕ್ಕಂಥದ್ದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಹೆಚ್. ಹಾಲಪ್ಪ : ಈ ಹಳ್ಳಿಗಳು ಶರಾವತಿ ಈ ರಾಜ್ಯಕ್ಕೆ ವಿದ್ಯುತ್ ಕೊಡುವುದಕ್ಕೆ ಮುಳುಗಡೆಯಾದಂಥ ಹಳ್ಳಿಗಳು. ಏನು ಈ ಹಳ್ಳಿಗಳವರು ನಿರಾಶ್ರಿತರಾದಾಗ ಪುನರ್ವಸತಿ ಕಲ್ಪಿಸಬೇಕಾದರೆ ಕಾಡಿನಲ್ಲಿ ರಾಜ್ಯ ಸರ್ಕಾರದ ಅರಣ್ಯ ಪ್ರದೇಶದಲ್ಲಿ ಆವಾಗ ಪುನರ್ವಸತಿ ಕಲ್ಪಿಸಿಕೊಟ್ಟಿದ್ದರು. ಈಗ ಅದೇ ಕಾರಣಕ್ಕಾಗಿ ಅರಣ್ಯ ಇಲಾಖೆಯೊಳಗಿದ್ದಾವೆ. ಅರಣ್ಯ ಇಲಾಖೆ ಪ್ರಕಾರ ವಿದ್ಯುತ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಮೂಲಭೂತ ಸೌಕರ್ಯಗಳು ಕೊಡುವುದಕ್ಕೆ ಅರಣ್ಯ ಇಲಾಖೆಯ ತಕರಾರೇನು? ಹಾಗಿದ್ದರೆ, ವಿದ್ಯುತ್ ಕೊಡುವುದಕ್ಕೇ ಬರುವುದಿಲ್ಲವೆ? ನನ್ನ ಕ್ಷೇತ್ರದಲ್ಲಿ 403 ಹಳ್ಳಿಗಳಿಗೆ ಈಗಲೂ ವಿದ್ಯುತ್ ಇಲ್ಲ. ದಯವಿಟ್ಟು, ತಾವು ಉತ್ತರ ಕೊಟ್ಟು ಬೇಗ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ಕುಮಾರಸ್ವಾಮಿ : ಹೊಸ ನಗರ ತಾಲ್ಲೂಕಿನ 400 ಹಳ್ಳಿಗಳ ವಿಷಯದ ಬಗ್ಗೆ ಸನ್ಮಾನ್ಯ ಸದಸ್ಯರ ಈ ಒಂದು ಕಾಳಜಿ ಏನಿದೆ, ಈ ವಿಷಯದಲ್ಲಿ ಅರಣ್ಯ ಇಲಾಖೆಯ ಕೆಲವು ಕಾನೂನುಗಳ ತೊಡಕುಗಳೇನಿವೆ, ಆ ತೊಡಕುಗಳನ್ನು ಬಗೆಹರಿಸಕ್ಕಂಥದ್ದಕ್ಕೆ ಸರ್ಕಾರ ಪರಿಶೀಲನೆ ಮಾಡಿ ಆದಷ್ಟು ಬೇಗ ಈ ಹಳ್ಳಿಗಳಿಗೆ ಏನು ಆ ಭಾಗದಲ್ಲಿ ಇವತ್ತು ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥದ್ದಕ್ಕೆ ಅಲ್ಲಿಯ ಜನರ ಒಂದು ಸಹಕಾರ ಏನಿದೆ, ಅದನ್ನು ಗಮನಿಸಿ, ಆ ಭಾಗದ ಜನರಿಗೂ ಆದಷ್ಟು ತ್ವರಿತವಾಗಿ ಈ ವಿದ್ಯುಚ್ಛಕ್ತಿಯ ಸಂಪರ್ಕವನ್ನು ಕಲ್ಪಿಸ ತಕ್ಕಂಥದ್ದಕ್ಕೆ ನಾವು ಕಾರ್ಯಕ್ರಮವನ್ನು ನಿರೂಪಿಸುತ್ತೇವೆ.

ಗೌರಿಬಿದನೂರು ತಾ: ನಲ್ಲಿ ಮರಳು ಗಣಿಗಾರಿಕೆಯಿಂದ ಕುಡಿಯುವ ನೀರಿಗೆ ಹಾಗೂ ಪರಿಸರಕ್ಕೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದರ ಬಗ್ಗೆ.

(15) 192. ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.